| | | |
|---|---|---|
| ಓ ಎಸ್ | 48/2014 | ಪಿ.ಡಬ್ಲ್ಯೂಃ 1 |

ಇಂದು ದಿಃ 12/2/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಸಿ ಡಿ ಕೆ ವಕೀಲರಿಂದಃ-

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಅಜ್ಜಿ ಮಾದಮ್ಮ 1995 ರಲ್ಲಿ ತೀರಿಕೊಂಡಿದ್ದರು. ನನ್ನ ತಾತ ಯಾವತ್ತು ತೀರಿಕೊಂಡಿದ್ದರು ಎಂದು ಕೇಳಿದರ ಅವರನ್ನು ನೋಡಿದ ನೆನಪು ನನಗಿಲ್ಲ ಎಂದು ನುಡಿಯುತ್ತೇನೆ. ನಾನು ಜನಿಸುವುದಕ್ಕೂ ಮೊದಲೇ ಅವರು ತೀರಿಕೊಂಡಿದ್ದಾರೆಯೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ. ನನ್ನ ಅಜ್ಜಿಯ ಮರಣ ಪ್ರಮಾಣ ಪತ್ರ ನನ್ನ ಬಳಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ತಾತನಿಗೆ ಅವರ ತಂದೆಯಿಂದ ಬಂದ ಆಸ್ತಿ ಇತ್ತು ಎಂದರೆ ಸರಿಯಲ್ಲ. ನನ್ನ ತಾತ ಮೊಳ್ಳಯ್ಯನ ಸ್ವಂತ ಊರು ಮಂಡಗಳ್ಳಿ ಎಂದರೆ ನಿಜ. ಅಲ್ಲಿ ನನ್ನ ತಾತನಿಗೆ ಸೇರಿದ ಮನೆ ಇತ್ತು. ಅದು ನನ್ನ ತಾತನಿಗೆ ಅವರ ತಂದೆಯಿಂದ ಬಂದಿತ್ತು. ಮಂಡಕಳ್ಳಿಯಲ್ಲಿ ನನ್ನ ತಾತ ಮೊಳ್ಳಯ್ಯನಿಗೆ ಯಾವುದೇ ಜಮೀನು ಇಲ್ಲ. ಮಂಡಕಳ್ಳಿಯ ಮನೆ ನನ್ನ ತಾತ ಮೊಳ್ಳಯ್ಯ ತೀರಿಕೊಂಡ ನಂತರ ನನ್ನ ಅಜ್ಜಿಯ ಹೆಸರಿಗೆ ಖಾತೆಯಾಗಿತ್ತು. ಆರೀತಿ ತೋರಿಸಲು ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನನ್ನ ತಾತ ಮೊಳ್ಳಯ್ಯ ಹಾಗು ಅಜ್ಜಿ ಮಾದಮ್ಮ ರವರಿಗೆ 6 ಜನ ಮಕ್ಕಳು. ಸದರಿ 6 ಜನ ರವರು ಎಂದರೆ ಮರಿದಾಸಯ್ಯ , ಚಿಕ್ಕರಂಗಮ್ಮ , ದೊಡ್ಡತಾಯಮ್ಮ , ಕಾಳಮ್ಮ , ಚಿಕ್ಕರಂಗಯ್ಯ ಮತ್ತು ಚಿಕ್ಕದಾಸಯ್ಯ ಎಂದರೆ ನಿಜ. ಆರೀತಿ ತೋರಿಸಲು ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಈಗ ಚಿಕ್ಕದಾಸಯ್ಯರವರನ್ನು ಹೊರತುಪಡಿಸಿ ಅವರ ಇತರೆಒಡಹುಟ್ಟಿದವರು ಯಾರೂ ಕೂಡ ಜೀವಂತ ಇಲ್ಲ. ಅವರೆಲ್ಲರೂ ನನ್ನ ಅಜ್ಜಿ ತೀರಿಕೊಂಡ ನಂತರ ತೀರಿಕೊಂಡಿರುವುದು ಆಗಿದೆ. ಮಂಡಕಳ್ಳಿಯ ಮನೆಯ ಖಾತೆ ನನ್ನ ಅಜ್ಜಿಯ ಹೆಸರಿನಿಂದ ಯಾರ ಹೆಸರಿಗೆ ಆಗಿದೆ ಎಂದು ಕೇಳಿದರೆ ನನ್ನ ದೊಡ್ಡಪ್ಪ ಮರಿದಾಸಯ್ಯನ ಹೆಸರಿಗೆ ಆಗಿದೆ ಎಂದು ನುಡಿಯುತ್ತೇನೆ.

ಆರೀತಿ ತೋರಿಸಲು ದಾಖಲೆ ಹಾಜರುಪಡಿಸಬಲ್ಲೆ. ಮಾದಮ್ಮ ಹಾಗು ಮಳ್ಳಯ್ಯನವರಿಗೆ ಯಾವುದೇ ಸಂತತಿ ಇಲ್ಲದೇ ತೀರಿಕೊಂಡರು ಎಂದರೆ ಸರಿಯಲ್ಲ. ಮಾದಮ್ಮ ಮತ್ತು ಮಳ್ಳಯ್ಯ ನನ್ನ ಅಜ್ಜಿ ಹಾಗು ತಾತ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು, ಪ್ರತಿವಾದಿ 1 ರಿಂದ 3 , 8 ರಿಂದ 15 ರವರು ಯಾರೂ ಕೂಡ ಮಾದಮ್ಮ ಹಾಗು ಮೊಳ್ಳಯ್ಯರವರ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ.

ಮಂಡಕಳ್ಳಿ ಮನೆಯ ಖಾತೆ ಬದಲಾವಣೆಯಾಗುವ ಸಮಯ ಮಾದಮ್ಮ ರವರ ಕುಟುಂಬದ ಜೀವಂತ ಸದಸ್ಯರ ಪಟ್ಟಿ ಪಡೆದುಕೊಳ್ಳಲಾಗಿದೆಯೇ ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ಲಗ್ನಪತ್ರಿಕೆಯಲ್ಲಿ ತಂದೆತಾಯಿಯ ಹೆಸರಿನ ಜೊತೆ ಅಜ್ಜ ಅಜ್ಜಿಯ ಹೆಸರನ್ನು ಕೂಡ ನಮೂದು ಮಾಡುವುದು ಸಂಪ್ರದಾಯ ಎಂದರೆ ನಿಜ. ನನ್ನ ಮದುವೆ 2004 ನೇ ಸಾಲಿನಲ್ಲಿ ಆಗಿದೆ. 1 ನೇ ವಾದಿ ಜಯಲಕ್ಷ್ಮಿರವರು ಮದುವೆ 1998-99 ರಲ್ಲಿ ಆಗಿದೆ. ನಾರಾಯಣರವರ ಮದುವೆ ಅಂದಾಜು 2006 ರಲ್ಲಿ ಆಗಿರುತ್ತೆ. ರಂಗಸ್ವಾಮಿಗೆ ಮದುವೆಯಾಗಿಲ್ಲ. ರಂಗರಾಜುವಿನ ಮದುವೆಯಾಗಿ 8 ವರ್ಷವಾಗಿದೆ. ನಮ್ಮ 4 ಮಂದಿ ವಾದಿಯರ ಮದುವೆಯ ಆಮಂತ್ರಣ ಪತ್ರಿಕೆ ನಮ್ಮ ಬಳಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ಚಿಕ್ಕರಂಗ್ಯರವರು 2002 ರಲ್ಲಿ ಕಾಲವಾಗಿದ್ದರು. ನನ್ನ ತಾಯಿ ಹೆಸರು ಲಕ್ಷ್ಮಮ್ಮ. ಆಕೆ ಈ ದಾವೆಯಲ್ಲಿ 2 ನೇ ಪ್ರತಿವಾದಿ ಎಂದರೆನಿಜ. ಆಕೆ ಹಾಗು ನಾವು ಪರಸ್ಪರ ಚನ್ನಾಗಿದ್ದೇವೆ. ನನ್ನ ತಂದೆ ಬದುಕಿದ್ದಾಗ ಪಡೆದುಕೊಂಡಿದ್ದ ರೇಷನ್ ಕಾರ್ಡ್ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನನ್ನ ತಂದೆಯ ಕುರಿತಾದ ಮತದಾರರ ಗುರುತಿನ ಚೀಟಿ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಮರಿದಾಸಯ್ಯ , ಚಿಕ್ಕರಂಗಯ್ಯ ಹಾಗು ಚಿಕ್ಕದಾಸಯ್ಯ ರವರು ಪ್ರತ್ಯೇಕಪ್ರತ್ಯೇಕವಾಗಿ ವ್ಯವಸಾಯಮಾಡಿಕೊಂಡಿದ್ದಾರೆ ಹೊರತು ಜಂಟಿ ಕುಟುಂಬದಲ್ಲಿ ವಾಸವಿಲ್ಲ. ಮಾದಮ್ಮ

ಹಾಗು ಮೊಳ್ಳಯ್ಯ ರವರ ಎಲ್ಲಾ ಮಕ್ಕಳು ಪರಸ್ಪರ ವಿಭಾಗಮಾಡಿಕೊಂಡು ಪ್ರತ್ಯೇಕವಾಸವಿದ್ದಾರೆ. ಆರೀತಿ ವಿಭಾಗಮಾಡಿಕೊಂಡಿದ್ದು ಎಷ್ಟು ವರ್ಷದ ಹಿಂದೆ ಎಂದು ಗೊತ್ತಿಲ್ಲ. ಸದರಿ ವಿಭಾಗ ಬಾಯಿಮಾತಿನಲ್ಲಿ ಆಗಿರುವುದೇ ಅಥವಾ ಬರವಣಿಗೆ ಆಗಿತ್ತೇ ಎಂದು ಗೊತ್ತಿಲ್ಲ.

ಚಿಕ್ಕದಾಸಯ್ಯ ರವರು ಈ ದಾವೆಯಲ್ಲಿ ತಕರಾರು ಸಲ್ಲಿಸಿಲ್ಲ. ಈ ದಾವೆ ಸಲ್ಲಿಸುವಾಗ ನಾವು ಮಾದಮ್ಮ ಹಾಗು ಮೊಳ್ಳಯ್ಯ ರವರು ಕಾನೂನು ಬದ್ದ ವಾರಸುದಾರು ಎಂದು ತೋರಿಸುವಂತ ದಾಖಲೆ ಅಂದರೆ ಜೀವಂತ ಸದಸ್ಯರ ದೃಡೀಕರಣ ಪತ್ರ ಹಾಜರು ಪಡಿಸಲು ತೊಂದರೆ ಇತ್ತೆ ಎಂದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತೇನೆ. ನಿ ಪಿ 1 ವಂಶವೃಕ್ಷವನ್ನು ನನ್ನ ಹೇಳಿಕೆ ಮೇರೆಗೆ ತಯಾರು ಮಾಡಿರುವುದು ಎಂದರೆ ನಿಜ. ಸದರಿ ವಂಶವೃಕ್ಷಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲವಾಗಲಿ ಎಂದು ಆರೀತಿ ಸೃಷ್ಟಿಮಾಡಿರುವುದು ಎಂದರೆ ಸರಿಯಲ್ಲ. ದಾವಾ ಸ್ವತ್ತಿಗು ಹಾಗು ವಾದಿಗಳು, 1 ರಿಂದ 3 ನೇ ಮತ್ತು 8 ರಿಂದ 15 ನೇ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಹೆಬ್ಬ್ಯಾ ಗ್ರಾಮದಲ್ಲಿ ವಾಸವಿದ್ದ ಬುಂಡಯ್ಯ ಉಃ ಬುಂಡ ಬಿನ್ ಮಾದಯ್ಯ ಉಃ ಮಾದ ರವರಿಗೆ 3 ಜನ ಮಕ್ಕಳು ಎಂದರೆ ಸರಿಯಲ್ಲ. ಅವರೆಂದರೆ ಪುಟ್ಟಮಾದಯ್ಯ ಉಃ ಬುಂಡಯ್ಯನ ಪುಟ್ಟಮಾದಯ್ಯ , ರಾಮಯ್ಯ ಹಾಗು ಮಾದಮ್ಮ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಬುಂಡಯ್ಯ ರವರಿಗೆ ಒಬ್ಬಳೇ ಮಗಳು ಹಾಗು ಆಕೆಯ ಹೆಸರು ಮಾದಮ್ಮ. ಬುಂಡಯ್ಯ ಉಃ ಬುಂಡ ರವರ ಪತ್ನಿ ಹೆಸರು ಸಿದ್ದಮ್ಮ ಎಂದರೆ ಸರಿಯಲ್ಲ. ಬುಂಡಯ್ಯ ಉಃ ಬುಂಡ ರವರ ಹೆಂಡತಿಯ ಹೆಸರು ಹೇಳಲು ಗೊತ್ತಿಲ್ಲ. ನಾನು ಹೇಳುವ ಮಾದಮ್ಮ ರವರ ತಾಯಿಯ ಹೆಸರು ಗೊತ್ತಿಲ್ಲ. ನಾವು ಮಾದಮ್ಮನ ವಂಶಸ್ತರು ಅಲ್ಲವಾದ್ದರಿಂದ ಆಕೆಯ ತಾಯಿಯ ಹೆಸರು ಗೊತ್ತಿಲ್ಲ ಎಂದರೆ ಸರಿಯಲ್ಲ. ಆಕೆ

ಬುಂಡಯ್ಯ ಉಃ ಬುಂಡ ರವರ ಒಬ್ಬಳೇ ಮಗಳು ಎಂದರೆ ಸರಿಯಲ್ಲ.

ಬುಂಡಯ್ಯ ಉಃ ಬುಂಡನ ಪತ್ನಿ ಸಿದ್ದಮ್ಮ 7 ನೇ ಪ್ರತಿವಾದಿ ರಂಗಯ್ಯನ ಸೋದರತ್ತೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ 7 ನೇ ಪ್ರತಿವಾದಿ ಸಲ್ಲಿಸಿರುವ ತಕರಾರಿನಲ್ಲಿ ಏನು ಹೇಳಿದ್ದಾರೆ ಎಂದು ತಿಳಿದುಕೊಂಡಿಲ್ಲ. ಮಾದಮ್ಮರವರು ಒಬ್ಬಳೇ ಮಗಳು ಎಂದು ನಾನು ಹೇಳಿರುವ ಕುರಿತಂತೆ ಆರೀತಿ ನಿಜವಾಗಿದ್ದಲ್ಲಿ ಆಕೆಯ ಮದುವೆಯ ನಂತರ ಆಕೆ ಹೆಬ್ಬ್ಯಾ ಗ್ರಾಮದಲ್ಲಿ ಯಾವುದೇ ಕಾರಣಕ್ಕೂ ವಾಸವಿರುವುದನ್ನು ಬಿಡುತ್ತಿರಲಿಲ್ಲ ಎಂದರೆ ಆಕೆಗೆ ಮದುವೆಯಾದ ನಂತರ ಗಂಡನಮನೆಗೆ ಮಂಡಕಳ್ಳಿಗೆ ಹೋದಳು ಎಂದು ನುಡಿಯುತ್ತೇನೆ. ಹೆಬ್ಬ್ಯಾ ಗ್ರಾಮದಲ್ಲಿ ವಾಸವಿರುವ ವ್ಯಕ್ತಿಗಳ ಪೈಕಿ ನಾನು ಹೇಳುತ್ತಿರುವ ಮಾದಮ್ಮ ಆಕೆಯ ತಂದೆ ತಾಯಿಗೆ ಒಬ್ಬಳೇ ಮಗಳು ಎಂದು ತಿಳಿದಿರುವವರು ಇದ್ದಾರೆ ಅವರನ್ನು ನ್ಯಾಯಾಲಯಕ್ಕೆ ಕರೆತಂದು ಸಾಕ್ಷಿ ನುಡಿಸಬಲ್ಲೆ. ಬುಂಡಯ್ಯ ಉಃ ಬುಂಡ ರವರ ಮಗಳು ಮಾದಮ್ಮನ ಮದುವೆ 1940 ಕ್ಕೂ ಮೊದಲು ಆಗಿತ್ತು ಎಂದರೆ ಇರಬಹುದು. ಬುಂಡಯ್ಯ ಉಃ ಬುಂಡ ನ 2 ನೇ ಮಗ ರಾಮಯ್ಯ ಮದುವೆಯಾಗದೆ ತೀರಿಕೊಂಡರು ಎಂದರೆ ನಿಜ. ಬುಂಡಯ್ಯ ಉಃ ಬುಂಡ ತೀರಿಕೊಂಡ ನಂತರ ಸ್ವತ್ತುಗಳ ಖಾತೆ ಯಾರ ಹೆಸರಿಗೆ ಆಗಿದ್ದವು ಎಂದು ತೋರಿಸುವ ದಾಖ್ಲೆಗಳನ್ನು ಹಾಜರುಪಡಿಸಬಹುದೇ ಎಂದು ಕೇಳಿದರೆ ಈಗಾಗಲೇ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತೇನೆ. ಬುಂಡಯ್ಯ ಉಃ ಬುಂಡ ರವರ ಹಿರಿ ಮಗ ಪುಟ್ಟಮಾದಯ್ಯ ಉಃ ಬುಂಡಯ್ಯನ ಪುಟ್ಟಮಾದಯ್ಯ ಹೆಂಡತಿಯ ಹೆಸರು ಮಾದಮ್ಮ ಎಂದರೆ ಅವರು ನಮ್ಮ ಅಜ್ಜಿ ಮಾದಮ್ಮನ ಅಣ್ಣತಮ್ಮಂದಿರ ಮಕ್ಕಳು ಎಂದು ನುಡಿಯುತ್ತೇನೆ. ಅವರು ನನ್ನ ಅಜ್ಜಿಯ ಸ್ವಂತ ಒಡಹುಟ್ಟಿದವರೇ ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ಅವರು ಸ್ವಂತ ಒಡಹುಟ್ಟಿದವರು ಎಂದು ಒಪ್ಪಿ ಕೊಂಡರೆ ಸತ್ಯಾಂಶ ಹೊರಬರುತ್ತೆ ಎಂದು ಅಲ್ಲಗಳೆಯುತ್ತಿರುವುದು ಎಂದರೆ ಸರಿಯಲ್ಲ. ನನ್ನ ಅಜ್ಜಿಯ ಒಡಹುಟ್ಟಿದವರು ಎಂದು ಹೇಳಿರುವ ಕುರಿತು ವೆಂಕಟರಾಮು ಮತ್ತು ರಂಗಯ್ಯ ರವರು ನನ್ನ ಅಜ್ಜಿಗೆ ಅಣ್ಣತಮ್ಮಂದಿರ ಮಕ್ಕಳು. ಆರೀತಿ ನನ್ನ ಅಜ್ಜಿಯ ಅಣ್ಣನ ಮಕ್ಕಳೇ ಅಥವಾ ತಮ್ಮನ ಮಕ್ಕಳೆ ಎಂದು ಕೇಳಿದರೆ

ನಿಖರವಾಗಿ ಹೇಳಲು ಗೊತ್ತಿಲ್ಲ ಎಂದು ನುಡಿಯುತ್ತೇನೆ.

ಬುಂಡಯ್ಯ ಉಃ ಬುಂಡ ರವರಿಗೆ ಎಷ್ಟು ಮಂದಿ ಒಡಹುಟ್ಟಿದವರು ಎಂದು ಗೊತ್ತಿಲ್ಲ. ಬುಂಡಯ್ಯ ಉಃ ಬುಂಡ ರವರು ಒಬ್ಬನೇ ಮಗ ಹಾಗು ಅವರ ಒಡಹುಟ್ಟಿದವರು ಬೇರೆ ಯಾರೂ ಇರಲಿಲ್ಲ ಎಂದರೆ ಸರಿಯಲ್ಲ. ಮಾದಮ್ಮಳಿಗೂ ಹಾಗು ನನಗೂ ಯಾವುದೇ ಸಂಬಂಧ ಇಲ್ಲದೇ ಇರುವುದರಿಂದ ಅವರ ಕುಟುಂಬದ ಯಾವುದೇ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ.

ನಾನು ಹಾಜರು ಪಡಿಸಿರುವ 2 ಕ್ರಯಪತ್ರಗಳ ಲ್ಲಿ ಏನು ಬರೆದಿದೆ ಎಂದು ಗೊತ್ತು ಅದರಲ್ಲಿ ಇರುವ ಮಾದಮ್ಮ ಹಾಗು ಮಹದೇವ ರವರು ಬುಂಡಯ್ಯ ಉಃ ಬುಂಡ ರವರ ಮೊದಲನೇ ಮಗ ಪುಟ್ಟಮಾದಯ್ಯ ಉಃ ಬುಂಡಯ್ಯನ ಪುಟ್ಟಮಾದಯ್ಯ ರವರ ಪತ್ನಿ ಹಾಗು ಮಗ ಎಂದರೆ ಸರಿಯಲ್ಲ. ಸದರಿ ನಿ ಪಿ 24 ಕ್ರಯಪತ್ರದಲ್ಲಿ ರುವ " ಅಡಕನ ಹಳ್ಳಿ ಗ್ರಾಮದಲ್ಲಿ ಇರುವ ವೀರಶೈವ ಮತದ ಪುಟ್ಟಬಸಪ್ಪ ನವರ ಮಗ ಎ ಪಿ ದೇವರಾಜಪ್ಪನವರಿಗೆ ---- ಬುಂಡನ ಪುಟ್ಟಮಾದಯ್ಯನ ಕುಟುಂಬ ಶ್ರೀಮತಿ. ಮಾದಮ್ಮ----1 ನೇ ಮಗ ಮಾದಯ್ಯ ---- 2 ನೇ ಮಗ ಶಂಬುಸ್ವಾಮಿ ---- 3 ನೇ ಸಣ್ಣಮಾದಯ್ಯ ----" ಎಂದು ಪತ್ರದಲ್ಲಿ ನಮೂದು ಆಗಿರುವ ಬುಂಡನ ಪುಟ್ಟಮಾದಯ್ಯ ರವರು ಬುಂಡಯ್ಯ ಹಿರಿಮಗ ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತೇನೆ. ಸದರಿ ಕ್ರಯಪತ್ರದಲ್ಲಿ ರುವ ಬುಂಡನ ಪುಟ್ಟಮಾದಯ್ಯ ಯಾರು ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ಸದರಿ ಪತ್ರದಲ್ಲಿ ರುವ ಇತರೆ 3 ವ್ಯಕ್ತಿಗಳಾದ ಮಾದಯ್ಯ , ಶಂಭುಸ್ವಾಮಿ ಹಾಗು ಸಣ್ಣಮಾದಯ್ಯ ಯಾರು ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ನಿ ಪಿ 25 ಕ್ರಯಪತ್ರದಲ್ಲಿ ಇರುವ "ಬುಂಡನ ಪುಟ್ಟಮಾದಯ್ಯನ ಕುಟುಂಬ ಶ್ರೀಮತಿ. ಮಾದಮ್ಮ ಉಃ ಚಿಕ್ಕತಾಯಮ್ಮ , ಮೈನರ್ ಮಗ ಸುಮಾರು 16 ವರ್ಷ ವಯಸ್ಸುಳ್ಳ ಮಹದೇವ " ರವರು ಯಾರು ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ಅವರು ಬುಂಡಯ್ಯ ಉಃ ಬುಂಡನ

ಮಗ ಎಂದು ಒಪ್ಪಿ ಕೊಂಡರೆ ನಿಜಾಂಶ ಬಯಲಾಗುತ್ತೆ ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ಅಲ್ಲಿ ಹೇಳಿರುವ ಮಾದಮ್ಮ ಹಾಗು ಮಹದೇವ ರವರ ಬಗ್ಗೆ ನಿಜಾಂಶ ಒಪ್ಪಿ ಕೊಂಡರೆ ತೊಂದರೆಯಾಗುತ್ತೆ ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ಸದರಿ 2 ಕ್ರಂ ಖಪತ್ರಗಳನ್ನು ಹಾಜರುಪಡಿಸಿರುವ ಕುರಿತು ಆ ಕ್ರಯಪತ್ರಗಳ ಬಗ್ಗೆ ನನಗೆ ಗೊತ್ತಾಗಿರುವುದು ಯಾವಾಗ ಎಂದು ಕೇಳಿದರೆ ನನ್ನ ದೊಡ್ಡಪ್ಪನ ಮಗ ರಂಗರಾಜು ತೀರಿಕೊಂಡಾಗ ಎಂದು ನುಡಿಯುತ್ತೇನೆ. ಅವರು ಯಾವಾಗ ತೀರಿಕೊಂಡಿದ್ದು ಎಂದು ದಾಖಲೆ ಹಾಜರುಪಡಿಸಿದ್ದೇನೆ. ನಿಖರ ದಿನಾಂಕ ಕೇಳಿದರೆ 8-10 ವರ್ಷಗಳ ಹಿಂದೆ ನುಡಿಯುತ್ತೇನೆ. ರಂಗರಾಜುವಿನ ತಂದೆಯ ಹೆಸರು ಮರಿದಾಸಯ್ಯ. ಸ್ವತ್ತುಗಳ ಖಾತೆ ಮರಿದಾಸಯ್ಯನ ಹೆಸರಿನಲ್ಲಿ ಇದ್ದ ಬಗ್ಗೆ ಆಗಲಿ ಅಥವಾ ರಂಗರಾಜು ಹೆಸರಿನಲ್ಲಿ ಇದ್ದ ಬಗ್ಗೆ ದಾಖಲೆ ಇಲ್ಲ.

ಬುಂಡಯ್ಯ ಉಃ ಬುಂಡ ಕಾಲವಾದ ನಂತರ ನಾನು ಹೇಳುತ್ತಿರುವ ಮಾದಮ್ಮನ ಹೆಸರಿಗೆ ಖಾತೆಯಾಗಿತ್ತು ಎಂದು ಅಥವಾ ಅವರ ಮಾಲೀಕತ್ವ ತೋರಿಸುವಂತರಹ ರೀತಿಯ ಅಥವಾ ಅವರು ಕಂದಾಯ ಕಟ್ಟಿದ್ದರ ಎಂದು ತೋರಿಸುವ ದಾಖಲೆಗಳು ಇವೆಯೇ ಎಂದು ಕೇಳಿದರೆ ಇವೆ ಎಂದು ನುಡಿಯುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಮಾದಮ್ಮ ತೀರಿಕೊಂಡ ನಂತರ ಅವರ 6 ಜನ ಮಕ್ಕಳು ಸ್ವಾದೀನಹೊಂದಿ ಕಂದಾಯ ಕಟ್ಟುತ್ತಿದ್ದರು ಎಂದು ತೋರಿಸುವ ದಾಖಲೆಗಳು ಇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಬುಂಡಯ್ಯ ಉಃ ಬುಂಡ ಕಾಲವಾದ ನಂತರ ಸದರಿ ಆಸ್ತಿಗಳು ಅವರ ಹಿರಿಮಗ ಪುಟ್ಟಮಾದಯ್ಯ ಉಃ ಬುಂಡಯ್ಯನ ಪುಟ್ಟಮಾದಯ್ಯ ನ ಹೆಸರಿನಲ್ಲಿ ಮಾಲೀಕತ್ವ ಹಾಗು ಸ್ವಾದೀನ ಕುರಿತು ಖಾತೆ ಬರುತ್ತಿತ್ತು ಎಂದರೆ ಸರಿಯಲ್ಲ. ಅವರ ಕಾಲಾನಂತರ ಅವರ ಪತ್ನಿ ಹಾಗು ಮಗ ಮಾದಮ್ಮ ಮತ್ತು ಮಹದೇವ ರವರ ಹೆಸರಿನಲ್ಲಿ ಮಾಲೀಕತ್ವ ಹಾಗು ಸ್ವಾದೀನ ಇತ್ತು ಎಂದರೆ ಸರಿಯಲ್ಲ. ಅವರು ಅವರ ಕುಟುಂಬದ ದರದು ನಿಮಿತ್ತ ದಾವಾ ಐಟಂ 3 ರ ಸ್ವತ್ತನ್ನು ಅಂದರೆ ಲಿಖಿತ ತಕರಾರಿನಲ್ಲಿ ಹೇಳಿರುವ ಸ್ವತ್ತನ್ನು ಹೆಬ್ಬಾ

ಗ್ರಾಮದ ಬಸವಣ್ಣ ಬಿನ್ ಪುಟ್ಟಬಸಪ್ಪ ರವರಿಗೆ ದಿಃ28/3/1970 ರ ನೋಂದಾಯಿತ ಭೋಗ್ಯಪತ್ರದ ಮೂಲಕ ರೂ500/ ಕ್ಕೆ 5 ವರ್ಷಕ್ಕೆ ಭೋಗ್ಯ ಮಾಡಿದ್ದರು ಎಂದರೆ ನಿಜ. ನಂತರ 8/10/1975 ರಂದು 5 ವರ್ಷಗಳಿಗೆ ರೂ.1000/ ಗಳಿಗೆ ಅದೇ ಸ್ವತ್ತನ್ನು ಎ ಪಿ ದೇವರಾಜ ರವರಿಗೆ ಭೋಗ್ಯ ಮಾಡಿದರು ಎಂದರೆ ಸರಿಯಲ್ಲ. ಎ ಪಿ ದೇವರಾಜಪ್ಪ ರವರ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ನಿಜ. ಸದರಿ 2 ಪತ್ರಗಳ ಕಾನೂನು ಬದ್ದತೆಯನ್ನು ಪ್ರಶ್ನಿಸಿ ನಾನು ದಾವೆ ಹೂಡಿದ್ದೇನೆಯೇ ಎಂದು ಕೇಳಿದರೆ ಇದೇ ದಾವೆ ಹಾಕಿರುವುದು ಎಂದು ನುಡಿಯುತ್ತೇನೆ. ಸದರಿ 2 ಭೋಗ್ಯಪತ್ರಗಳ ಬಗ್ಗೆ ಈ ದಾವೆಯಲ್ಲಿ ಏನೂ ಪರಿಹಾರ ಕೇಳಿಲ್ಲ ಎಂದರೆ ಈಗ ಯಾರು ಮಾಡಿಕೊಂಡಿರುವುದು ಎಂದು ಪ್ರಶ್ನಿಸಿದ್ದೇನೆ ಎಂದು ನುಡಿಯುತ್ತೇನೆ. ಸದರಿ 2 ಭೋಗ್ಯಪತ್ರಗಳ ಬಗ್ಗೆ ಈ ದಾವೆ ದಾಖಲಿಸುವ ಮೊದಲೇ ನನಗೆ ಮಾಹಿತಿ ಇತ್ತು ಎಂದರೆ ನಿಜ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.